# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 84 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 05.07.2023 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಳೆಗಾಲದ ಸಂದರ್ಭದಲ್ಲಿ ಕಡಲ್ಕೊರೆತಕ್ಕೆ ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿಗೊಳಗಾಗುವ ಪ್ರದೇಶಗಳನ್ನು ಸರ್ಕಾರವು ಗುರುತಿಸಿದೆಯೇ; ಹಾಗಿದ್ದಲ್ಲಿ, ಸದರಿ ಆಸ್ತಿ-ಪಾಸ್ತಿ ಸಂರಕ್ಷಣೆಗೆ ಸರ್ಕಾರ ಕೈಗೊಳ್ಳುವ ಮುಂಜಾಗ್ರತಾ ಕ್ರಮಗಳೇನು; | ಹೌದು<br><br>ಮಳೆಗಾಲದ ಸಂದರ್ಭದಲ್ಲಿ ಕಡಲ್ಕೊರೆತಕ್ಕೆ ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿಗೊಳಗಾಗುವ ಪ್ರದೇಶಗಳನ್ನು ಸಂರಕ್ಷಿಸಲು ವಿನ್ಯಾಸದಂತೆ ಕಾಮಗಾರಿಯನ್ನು ನಿರ್ವಹಿಸಲು ಕಷ್ಟಕರವಾಗುವುದರಿಂದ ಸಂಭವನೀಯ ಹೆಚ್ಚಿನ ಹಾನಿಯನ್ನು ತಡೆಗಟ್ಟಲು ಸದರಿ ಸಮುದ್ರ ಕೊರೆತ ಭಾದಿತ ಪ್ರದೇಶಗಳಲ್ಲಿ ಅವಶ್ಯಕ ಪ್ರಮಾಣದ ಕಲ್ಲುಗಳನ್ನು ಡಂಪ್ ಮಾಡಿ, ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಆಗುವ ಹೆಚ್ಚಿನ ಹಾನಿಯನ್ನು ತಡೆಗಟ್ಟಲಾಗುತ್ತದೆ. |
| (ಆ) | ಕಳೆದ 5 ವರ್ಷಗಳಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಳೆಗಾಲದ ಅವಧಿಯ ತುರ್ತು ಕಡಲ್ಕೊರೆತ ತಡೆ ಕಾಮಗಾರಿಗೆ ಮಂಜೂರಾದ ಅನುದಾನವೆಷ್ಟು; (ವಿವರ ನೀಡುವುದು) | ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಳೆಗಾಲದ ಅವಧಿಯ ತುರ್ತು ಕಡಲ್ಕೊರೆತ ತಡೆ ಕಾಮಗಾರಿಗೆ ಆಯವ್ಯಯದಲ್ಲಿ ಪ್ರತ್ಯೇಕವಾಗಿ ಯಾವುದೇ ಅನುದಾನವನ್ನು ಮೀಸಲಿರಿಸಿರುವುದಿಲ್ಲ.<br><br>ಆದರೆ, ಕಳೆದ 5 ವರ್ಷಗಳಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೈಗೊಂಡ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ "4711-ಸಮುದ್ರ ಕೊರೆತ ನಿಯಂತ್ರಣ ಕಾಮಗಾರಿಗಳು-ಪ್ರಧಾನ ಕಾಮಗಾರಿಗಳು" ರಡಿಯಲ್ಲಿ ಅನುದಾನವನ್ನು ಒದಗಿಸಲಾಗುತ್ತಿದ್ದು, ವರ್ಷವಾರು ವಿವರಗಳು ಕೆಳಗಿನಂತಿವೆ.<br><br>(ರೂ. ಲಕ್ಷಗಳಲ್ಲಿ) |

| ಜಿಲ್ಲೆ | 2018-19 | 2019-20 | 2020-21 | 2021-22 | 2022-23 |
|---|---|---|---|---|---|
| ಉ.ಕ. | 327.26 | 277.60 | 1065.00 | 1100.00 | 300.00 |
| ದ.ಕ. | 827.36 | 0.00 | 3.00 | 515.48 | 612.00 |
| ಉಡುಪಿ | 2136.04 | 698.67 | 2432.00 | 1884.52 | 1350.00 |
| **ಒಟ್ಟು** | **3290.66** | **976.27** | **3500.00** | **3500.00** | **2262.00** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ಸದರಿ ಕಾಮಗಾರಿಗಳನ್ನು ಯಾವ ರೀತಿ ನಿರ್ವಹಿಸಲಾಗುತ್ತದೆ; (ಸಂಪೂರ್ಣ ವಿವರ ನೀಡುವುದು)</td><td>ಮಳೆಗಾಲದ ಸಂದರ್ಭದಲ್ಲಿ ಕಡಲ್ಕೊರೆತಕ್ಕೆ ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿಗೊಳಗಾಗುವ ಪ್ರದೇಶಗಳನ್ನು ಸಂರಕ್ಷಿಸಲು ವಿನ್ಯಾಸದಂತೆ ಕಾಮಗಾರಿಯನ್ನು ನಿರ್ವಹಿಸಲು ಕಷ್ಟಕರವಾಗುವುದರಿಂದ ಸಂಭವನೀಯ ಹೆಚ್ಚಿನ ಹಾನಿಯನ್ನು ತಡೆಗಟ್ಟಲು ಸದರಿ ಸಮುದ್ರ ಕೊರೆತ ಭಾದಿತ ಪ್ರದೇಶಗಳಲ್ಲಿ ಅವಶ್ಯಕ ಪ್ರಮಾಣದ ಕಲ್ಲುಗಳನ್ನು ಡಂಪ್ ಮಾಡಿ, ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಆಗುವ ಹೆಚ್ಚಿನ ಹಾನಿಯನ್ನು ತಡೆಗಟ್ಟಲಾಗುತ್ತದೆ.<br><br>ಮುಂದುವರೆದು, ದೀರ್ಘಕಾಲಿಕ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿಗಳ ಅನುಷ್ಠಾನಕ್ಕೆ ಪರಿಣಿತ ಸಂಸ್ಥೆಗಳಾದ ಕೇಂದ್ರೀಯ ಜಲ ಮತ್ತು ಶಕ್ತಿ ಸಂಶೋಧನಾ ಕೇಂದ್ರ, ಪುಣೆ (CWPRS) ಹಾಗೂ ಕರ್ನಾಟಕ ಇಂಜಿನೀಯರಿಂಗ್ ಸಂಶೋಧನಾ ಕೇಂದ್ರ (KERS), ಕೃಷ್ಣರಾಜಸಾಗರ ಇವರಿಂದ ತಾಂತ್ರಿಕ ವಿನ್ಯಾಸ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ ಕಾಮಗಾರಿಗಳಿಗೆ ಪರಿಣಿತ ತಾಂತ್ರಿಕ ಸಂಸ್ಥೆಯಿಂದ ಮಾನಿಟರಿಂಗ್ ವರದಿಯನ್ನು ಸಹ ಪಡೆಯಲಾಗುತ್ತದೆ.</td></tr>
<tr><td>ಈ)</td><td>ಹಿಂದಿನ ವರ್ಷಗಳಲ್ಲಿ ಕೈಗೆತ್ತಿಕೊಂಡ ತುರ್ತು ಕಡಲ್ಕೊರೆತ ಕಾಮಗಾರಿಗಳ ಬಿಲ್ಲುಗಳು ಪಾವತಿಗೆ ಬಾಕಿ ಇದೆಯೇ; ಹೌದಾದಲ್ಲಿ, ಅದಕ್ಕೆ ಕಾರಣಗಳೇನು? (ಜಿಲ್ಲಾವಾರು ವಿವರ ನೀಡುವುದು)</td><td>ಹಿಂದಿನ ವರ್ಷಗಳಲ್ಲಿ ಕೈಗೆತ್ತಿಕೊಂಡ ತುರ್ತು ಕಡಲ್ಕೊರೆತ ಕಾಮಗಾರಿಗಳ ಯಾವುದೇ ಬಿಲ್ ಪಾವತಿಗೆ ಬಾಕಿಯಿರುವುದಿಲ್ಲ.<br><br>ಆದರೆ, ಈವರೆಗೆ ಲೆಕ್ಕ ಶೀರ್ಷಿಕೆ "4711- ಸಮುದ್ರ ಕೊರೆತ ನಿಯಂತ್ರಣ ಕಾಮಗಾರಿಗಳು- ಪ್ರಧಾನ ಕಾಮಗಾರಿಗಳು" ರಡಿಯಲ್ಲಿ ಕೈಗೆತ್ತಿಕೊಂಡ ಕಡಲ್ಕೊರೆತ ಪ್ರತಿಬಂಧಕ ಕಾಮಗಾರಿಗಳಿಗೆ ₹29.35 ಕೋಟಿ ಮೊತ್ತದ ಬಿಲ್ಲುಗಳು ಪಾವತಿಗೆ ಬಾಕಿ ಇರುತ್ತವೆ.<br><br>ಜಿಲ್ಲಾವಾರು ಬಾಕಿ ಇರುವ ಬಿಲ್ಲುಗಳ ವಿವರಗಳು ಈ ಕೆಳಗಿನಂತಿವೆ.
<table>
<tr><th>ಜಿಲ್ಲೆ</th><th>ಬಾಕಿ ಇರುವ ಬಿಲ್ಲು ಮೊತ್ತ (₹ಕೋಟಿಗಳಲ್ಲಿ)</th></tr>
<tr><td>ಉತ್ತರ ಕನ್ನಡ</td><td>11.64</td></tr>
<tr><td>ಉಡುಪಿ</td><td>14.49</td></tr>
<tr><td>ದಕ್ಷಿಣ ಕನ್ನಡ</td><td>3.22</td></tr>
<tr><td>ಒಟ್ಟು</td><td>29.35</td></tr>
</table></td></tr>
</table>

ಸಂಖ್ಯೆ: ಐಡಿಡಿ 89 ಪಿಎಸ್‌ಪಿ 2023

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು.**